**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ.**

**ಸಿ ಸಿ ನಂ. : 68/2019**

**ಪಿಡಬ್ಲ್ಯೂ – 2**

**ದಿನಾಂಕ 06-02-2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಆರೋಪಿ ಪರ ಶ್ರೀ. ಎ ಕೆ ಎಂ ವಕೀಲರಿಂದಃ –**

1. ನಾನು 32 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಬ್ಯಾಂಕ್ ನ ವ್ಯವಹಾರದ ಬಗ್ಗೆ ವಿಚಾರ ತಿಳಿದುಕೊಂಡಿರುತ್ತೇನೆ. ಸಾಮಾನ್ಯವಾಗಿ ಗ್ರಾಹಕರಿಗೆ ಸಾಲವನ್ನು ನೀಡುವಾಗ ಸದರಿಯವರು ನಾಲ್ಕು ತಿಂಗಳ ಪಿಗ್ಮಿ ಹಣವನ್ನು ಕಟ್ಟಿರಬೇಕು ಎಂದರೆ ಸರಿ. ದೂರನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ಆರೋಪಿಗೆ ವ್ಯಾಪಾರ ಮಾಡಲು ಸಾಲವನ್ನು ನೀಡಿರುತ್ತೇವೆ. ಆರೋಪಿಗೆ ರೂ. 90,000/- ಹಣವನ್ನು ಸಾಲವಾಗಿ ನೀಡಿರುತ್ತೇವೆ. ಆರೋಪಿಗೆ ಅವರು ಕಟ್ಟಿರುವ ಪಿಗ್ಮಿ ಹಣ ಸೇರಿಸಿ ರೂಪಾಯಿ ಒಂದು ಲಕ್ಷ ಹಣವನ್ನು ಸಾಲವಾಗಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ಪಿಗ್ಮಿ ರಡಿಯಲ್ಲಿ ನೀಡಿರುವ ಸಾಲಕ್ಕೆ ಶೇಕಡ 15 ರಷ್ಟು ಬಡಿಯನ್ನು ವಿಧಿಸಿರುತ್ತೇವೆ. ಸದರಿ ಬಡ್ಡಿಯ ವಿಚಾರವನ್ನು ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಆರೋಪಿಯು ಸಾಲವನ್ನು ಪಡೆಯುವಾಗ ರೂ. 30,000/- ಹಣವನ್ನು ಠೇವಣೆ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ.

2. ಆರೋಪಿಗೆ ಸಾಲವನ್ನು ನೀಡುವಾಗ ಜಾಮೀನುದಾರರಿಂದ ಎರಡು ಸಹಿಯನ್ನು ಪಡೆದಿರುತ್ತೇವೆ. ನಿಪಿ1 ಚೆಕ್ ನ್ನು ಆರೋಪಿಯು ಸಾಲ ಪಡೆಯುವ ಸಮಯದಲ್ಲಿ ಭದ್ರತೆಗಾಗಿ ನೀಡಿರುವ ಚೆಕ್ ಎಂದರೆ ಸರಿಯಲ್ಲ. ನಿಪಿ1ನ್ನು ಆರೋಪಿ ಖಾಲಿ ಚೆಕ್ ನೀಡಿದ್ದು, ಅದನ್ನು ನಾವು ಭರ್ತಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಕೃಷ್ಣ ಎನ್ನುವವರು ಪಿಗ್ಮಿ ಕಲೆಕ್ಟರ್ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಬ್ಯಾಂಕ್ ನ ವ್ಯವಸ್ಥಾಪಕರು

ಎನ್ನುತ್ತಾರೆ. ಆರೋಪಿ ಪಡೆದ ಸಾಲವನ್ನು ಪಿಗ್ಮಿ ಕಲೆಕ್ಟರ್ ಹತ್ತಿರ ನೀಡಿರುತ್ತಾರೆ, ಆದ್ದರಿಂದ ಅವರು ಯಾವುದೇ ಹಣವನ್ನು ಮರುಪಾವತಿ ಮಾಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು : ಮುಕ್ತಾಯ.

ಮರು ವಿಚಾರಣೆ : ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/–

(ಪ್ರದೀಪ ಪೋತದಾರ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ವಿರಾಜಪೇಟೆ.